# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 925

2] ಮಾನ್ಯ ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

3] ಉತ್ತರಿಸುವ ದಿನಾಂಕ : 24/02/2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೆ.ಎಸ್.ಐ.ಎಸ್.ಎಫ್. ಸ್ಥಾಪನೆ ಮಾಡಿರುವ ಉದ್ದೇಶವೇನು; ಎಷ್ಟು ಪಡೆಗಳನ್ನು ಸೃಜನೆ ಮಾಡಲಾಗಿದೆ; ಈ ಪಡೆಗಳ ಸಂಖ್ಯಾ ಬಲ ಎಷ್ಟು; ಮತ್ತು ಇಲ್ಲಿಯವರೆಗೂ ಒಟ್ಟು ಎಷ್ಟು ಸೂಕ್ಷ್ಮ ಸ್ಥಾವರಗಳಲ್ಲಿ ಕೆ.ಎಸ್.ಐ.ಎಸ್.ಎಫ್. ಭದ್ರತೆ ಒದಗಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ದೇಶಾದ್ಯಂತ ಭಯೋತ್ಪಾದಕ ಹಾಗೂ ವಿಧ್ವಂಸಕ ಕೃತ್ಯಗಳು ಹೆಚ್ಚಾಗುತ್ತಿರುವುದರಿಂದ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ ಈ ಮಾದರಿಯ ಪಡೆಗಳನ್ನು ಸೃಜಿಸಿ, ರಾಜ್ಯ ಸರ್ಕಾರ ಹಾಗೂ ಖಾಸಗಿ ಸ್ವಾಮ್ಯದ ವಿವಿಧ ಸ್ಥಾವರಗಳಿಗೆ ಭದ್ರತೆ ಒದಗಿಸುವ ನಿಟ್ಟಿನಲ್ಲಿ 2011ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ 03 ಪಡೆಗಳನ್ನು ಸೃಜಿಸಲಾಗಿದೆ. ರಾಜ್ಯದ ಜಲಾಶಯಗಳು, ವಿದ್ಯುದಾಗಾರಗಳು, ರಾಜ್ಯದ ವಿಮಾನ ನಿಲ್ದಾಣಗಳು, ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳು ಹಾಗೂ ಮುಂತಾದ ಸೂಕ್ಷ್ಮ ಸ್ಥಾವರಗಳಿಗೆ ಭದ್ರತೆ ಒದಗಿಸಿ ಯಾವುದೇ ಧಕ್ಕೆಯಾಗದಂತೆ ಸ್ಥಳೀಯ ಇಲಾಖೆಗಳ ಸಹಕಾರದೊಂದಿಗೆ ಭದ್ರತೆಯನ್ನು ನೀಡುವುದು ಉದ್ದೇಶ ಹಾಗೂ ಕರ್ತವ್ಯಗಳಾಗಿರುತ್ತದೆ.<br><br>ಪ್ರಸ್ತುತ ರಾಜ್ಯದಲ್ಲಿ ಒಟ್ಟು 03 ಕೆ.ಎಸ್.ಐ.ಎಸ್.ಎಫ್. ಪಡೆಗಳು ಸೃಜನೆಗೊಂಡು ಕಾರ್ಯನಿರ್ವಹಿಸುತ್ತಿದ್ದು, 03 ಪಡೆಗಳಲ್ಲಿ ಒಟ್ಟು 3096 ಕಾರ್ಯಕಾರಿ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ವಿವರವನ್ನು ಅನುಬಂಧ 'ಅ' ರಲ್ಲಿ ಇರಿಸಿದೆ.<br><br>ಕೆ.ಎಸ್.ಐ.ಎಸ್.ಎಫ್. ಪಡೆಗಳಿಂದ ಭದ್ರತೆ ಒದಗಿಸಲಾಗಿರುವ ರಾಜ್ಯದ ಒಟ್ಟು 39 ಸೂಕ್ಷ್ಮ ಸ್ಥಾವರಗಳ ವಿವರವನ್ನು ಅನುಬಂಧ 'ಆ' ರಲ್ಲಿ ಇರಿಸಿದೆ. |
| ಆ) | ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಒಟ್ಟು ಸೂಕ್ಷ್ಮ ಸ್ಥಾವರಗಳೆಷ್ಟು; ಕೆ.ಎಸ್.ಐ.ಎಸ್.ಎಫ್. ಭದ್ರತೆಗಾಗಿ ಕೋರಿಕೆ ಬಂದಿರುವ ಪ್ರಕರಣಗಳೆಷ್ಟು; ಎಲ್ಲೆಲ್ಲಿ ನಿಯೋಜಿಸಲಾಗಿದೆ: ಈ ಬೆಟಾಲಿಯನ್‌ಗಳ ನಿಯೋಜನೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ವಿವರ ನೀಡುವುದು) | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವ್ಯಾಪ್ತಿಯ ವಿವಿಧ ವಿದ್ಯುತ್ ಉತ್ಪಾದನಾ ಕೇಂದ್ರಗಳು, ರಾಜ್ಯ ಕರಾವಳಿಯ ಚಿಕ್ಕ ಬಂದರುಗಳು, ಮೈಸೂರು ಅರಮನೆ, ಹಟ್ಟಿ ಚಿನ್ನದ ಗಣಿ ರಾಯಚೂರು, ಎನ್‌ಜಿಇಎಫ್ ಲಿ. ಬೆಂಗಳೂರು, ನಮ್ಮ ಮೆಟ್ರೋ ಹಾಗೂ ಖಾಸಗಿ ಸಂಸ್ಥೆಗಳಾದ ಟರ್ಫ್‌ಕ್ಲಬ್ ಬೆಂಗಳೂರು, ಇನ್ಫೋಸಿಸ್ ಮಂಗಳೂರು, ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಗಳು ಹಾಗೂ |

<table>
<tr><td></td><td></td><td>ರಾಜ್ಯದಲ್ಲಿರುವ ವಿವಿಧ ಬ್ಯಾಂಕ್‌ಗಳ ಕರೆನ್ಸಿ ಚೆಸ್ಟ್‌ಗಳ ಭದ್ರತೆಗಾಗಿ ಕೆಎಸ್‌ಐಎಸ್‌ಎಫ್ ನಿಂದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸುವಂತೆ ಕೋರಿ ಪ್ರಸ್ತಾವನೆಗಳು ಇಲಾಖೆಗೆ ಬಂದಿರುತ್ತದೆ.<br><br>ಪ್ರಸ್ತುತ ರಾಜ್ಯದ ಸೂಕ್ಷ್ಮ ಸ್ಥಾವರಗಳಿಗೆ ಕೆಎಸ್‌ಐಎಸ್‌ಎಫ್ ಪಡೆಗಳಿಂದ ಒದಗಿಸಲಾಗಿರುವ ಭದ್ರತೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಂದಾಯವಾದ ನಿಯೋಜನ ಮೊತ್ತದ ವಿವರ ಕೆಳಕಂಡಂತಿರುತ್ತದೆ.<br><br>
<table>
<tr><th>ಕೆ.ಎಸ್.ಐ.ಎಸ್.ಎಫ್. ಪಡೆ</th><th>ಸಂದಾಯವಾದ ನಿಯೋಜನ ಮೊತ್ತ</th></tr>
<tr><td>1ನೇ ಪಡೆ</td><td>ರೂ.33,82,28,464/-</td></tr>
<tr><td>2ನೇ ಪಡೆ</td><td>ರೂ.20,80,85,512/-</td></tr>
<tr><td>3ನೇ ಪಡೆ</td><td>ರೂ.47,98,47,864/-</td></tr>
<tr><td>ಒಟ್ಟು</td><td>ರೂ.1,02,61,61,840/-</td></tr>
</table></td></tr>
<tr><td>ಇ)</td><td>ಅಹಿತಕರ ಘಟನೆಗಳನ್ನು ತಪ್ಪಿಸಲು ನ್ಯಾಯಾಲಯ, ನಮ್ಮ ಮೆಟ್ರೋ, ವಿಧಾನಸೌಧ, ಜಲಪಾತಗಳು, ವಿಮಾನ ನಿಲ್ದಾಣಗಳನ್ನೊಳಗೊಂಡಂತೆ ಸೂಕ್ಷ್ಮ ಸ್ಥಾವರಗಳ ಭದ್ರತೆಗಾಗಿ ಕೆ.ಎಸ್.ಐ.ಎಸ್.ಎಫ್. ಬೆಟಾಲಿಯನ್ ಸೃಜನೆ ಮಾಡಲು ಕೈಗೊಂಡಿರುವ ಹಾಗೂ ನೇಮಕಾತಿ ಮಾಡಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು;</td><td>ನಮ್ಮ ಮೆಟ್ರೋ ಭದ್ರತೆಗಾಗಿ ಕೆಎಸ್‌ಐಎಸ್‌ಎಫ್ ನಿಂದ ಒಂದು ಪೂರ್ಣ ಪ್ರಮಾಣದ ಮೆಟ್ರೋ ಬೆಟಾಲಿಯನ್ ಸ್ಥಾಪಿಸಲು ಆದೇಶಿಸಲಾಗಿದೆ. ಸದರಿ ಹುದ್ದೆಗಳನ್ನು ನೇರ ನೇಮಕಾತಿಯ ಬದಲು ನಿಯೋಜನೆ ಆಧಾರದ ಮೇಲೆ ತೆಗೆದುಕೊಳ್ಳಲು ಸೂಚಿಸಿರುವುದರಿಂದ, ಸದರಿ ಬೆಟಾಲಿಯನ್ ಸೃಜಿಸುವ ಬಗ್ಗೆ ಪರಿಶೀಲಿಸಲಾಗುವುದು.<br><br>ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ 4, 5 ಮತ್ತು 6ನೇ ಹೊಸ ಪಡೆಗಳನ್ನು (ಬೆಂಗಳೂರು ಭಾಗಕ್ಕೆ, ಕಲ್ಯಾಣ ಕರ್ನಾಟಕ ಭಾಗಕ್ಕೆ ಮತ್ತು ಮೈಸೂರು ಪ್ರಾಂತ್ಯಕ್ಕೆ ಒಂದರಂತೆ) ಸೃಜಿಸುವ ಪ್ರಸ್ತಾವನೆಯನ್ನು ಅನುದಾನದ ಲಭ್ಯತೆಯ ಮೇಲೆ ಪರಿಶೀಲಿಸಲಾಗುವುದು.</td></tr>
<tr><td>ಈ)</td><td>ಹಾಗಿದ್ದಲ್ಲಿ ದೆಹಲಿಯಲ್ಲಿರುವ ಮೆಟ್ರೋಗಳಿಗೆ ಸಿ.ಐ.ಎಸ್.ಎಫ್. ಭದ್ರತೆ ಒದಗಿಸಿದಂತೆ ರಾಜ್ಯದಲ್ಲಿಯೂ ನಮ್ಮ ಮೆಟ್ರೋಗೆ ಈಗಿರುವ ಖಾಸಗಿ ಭದ್ರತೆಯನ್ನು ತೆಗೆದು ಕೆ.ಎಸ್.ಐ.ಎಸ್.ಎಫ್. ಭದ್ರತೆ ಒದಗಿಸಲು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td><td>ನಮ್ಮ ಮೆಟ್ರೋವಿನಲ್ಲಿ ಒಟ್ಟು-51 ಮೆಟ್ರೋ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಕೆ.ಎಸ್.ಐ.ಎಸ್.ಎಫ್. ನಿಂದ ನಮ್ಮ ಮೆಟ್ರೋ ಭದ್ರತಾ ಕರ್ತವ್ಯಕ್ಕಾಗಿ 06 ನೆಲಮಾಳಿಗೆ ನಿಲ್ದಾಣಗಳಾದ ಕಬ್ಬನ್ ಪಾರ್ಕ್, ವಿಧಾನಸೌಧ, ಸರ್.ಎಂ.ವಿಶ್ವೇಶ್ವರಯ್ಯ, ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ, ಕೆ.ಆರ್.ಮಾರ್ಕೆಟ್ ಮತ್ತು ಚಿಕ್ಕಪೇಟೆ ಮೆಟ್ರೋ ನಿಲ್ದಾಣಗಳಿಗೆ ನಿಯೋಜಿಸಲಾಗಿರುತ್ತದೆ ಹಾಗೂ ಕೆಂಪೇಗೌಡ ಮೆಟ್ರೋ ನಿಲ್ದಾಣದಲ್ಲಿ ಭದ್ರತಾ ಕರ್ತವ್ಯಕ್ಕಾಗಿ ನಿಯೋಜಿಸಲಾಗಿದೆ. ಉಳಿದಂತೆ 45 ಮೆಟ್ರೋ ನಿಲ್ದಾಣಗಳಲ್ಲಿ ಖಾಸಗಿ ಭದ್ರತಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.</td></tr>
</table>

**ಸಂಖ್ಯೆ: ಹೆಚ್‌ಡಿ 34 ಪಿಓಪಿ 2022**

5/3/2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು.

## ಅನುಬಂಧ 'ಅ'

ಒಂದು ಪಡೆಯ ಸಂಖ್ಯಾ ಬಲ ಈ ಕೆಳಕಂಡಂತಿದೆ.

| | Comdt | Dy. Comdt | Asst. Comdt | PI | PSI | ASI | HC | PC | Jame dar | Follo wer | Total |
|---|---|---|---|---|---|---|---|---|---|---|---|
| **Sanctioned** | 01 | 01 | 08 | 24 | 67 | 126 | 155 | 581 | 18 | 51 | **1032** |

ಮೂರು ಪಡೆಯ ಸಂಖ್ಯಾ ಬಲ ವಿವರ ಈ ಕೆಳಕಂಡಂತಿದೆ.

| | Comdt | Dy. Comdt | Asst. Comdt | PI | PSI | ASI | HC | PC | Jame dar | Follo wer | Total |
|---|---|---|---|---|---|---|---|---|---|---|---|
| **Sanctioned** | 03 | 03 | 24 | 72 | 201 | 378 | 465 | 1743 | 52 | 155 | **3096** |

## ಅನುಬಂಧ 'ಆ'

ಕೆ.ಎಸ್.ಐ.ಎಸ್.ಎಫ್. ಮೂರು ಪಡೆಗಳಿಂದ ರಾಜ್ಯದಲ್ಲಿ ಕೆಳಕಂಡ 39 ಸೂಕ್ಷ್ಮ ಸ್ಥಾವರಗಳಿಗೆ ಭದ್ರತೆಯನ್ನು ಒದಗಿಸಲಾಗಿದೆ.

| Sl. No. | Name of Vital Installations | Sl. No. | Name of Vital Installations |
|---|---|---|---|
| 1. | RBI | 21. | Kabini Dam |
| 2. | Rajabhavan | 22. | Nagu Dam |
| 3. | Bengaluru Prison | 23. | Taraka Dam |
| 4. | Mangalore Prison | 24. | Tungabhadra Dam |
| 5. | Belagavi Prison | 25. | Dharwad High Court |
| 6. | Bellari Prison | 26. | Gulbarga High Court |
| 7. | KRS Dam | 27. | RSS Bhavana |
| 8. | Alamatti Dam | 28. | FDC, Bangalore |
| 9. | BTPS, Kudutini | 29. | Narayanapura Dam |
| 10. | Namma Metro | 30. | Jindal Airport |
| 11. | Hubballi Airport | 31. | Hemavathi Dam |
| 12. | Belagavi Airport | 32. | KPA-Mysuru |
| 13. | Suvarna Soudha | 33. | Sharavathi Power Station |
| 14. | Vidhana Soudha | 34. | Mahathama Gandhi Power Station |
| 15. | Police Chief Office | 35. | Linganamakki Dam |
| 16. | Metro Quarters | 36. | Mani, Chakra & Mastikatte |
| 17. | Mysuru Airport | 37. | Varahi Power Station |
| 18. | Kalaburagi Airport | 38. | Shivanasumudra Power Station |
| 19. | Bidar Airport | 39. | Gerusoppa Dam |
| 20. | Harangi Dam | | |